*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಅಧ್ಯಕ್ಷರೇ, ಈ ಬಿಲ್ಲನ್ನು ಮುಖ್ಯವಾಗಿ ತಂದಿರುವುದು ಸಾಧ್ಯವಾದಷ್ಟು ಮಟ್ಟಿಗೆ ಈಗ ಸೊಸೈಟಿಗಳಲ್ಲಿ ನಡೆಯುತಕ್ಕ ಅವ್ಯವಸ್ಥೆಗಳನ್ನು ಸರಿಪಡಿಸಬೇಕು ಮತ್ತು ಸೊಸೈಟಿಗಳ ವಿಷಯದಲ್ಲಿ ಈಗ ಬಂದಿರತಕ್ಕ ಕೆಟ್ಟ ಹೆಸರನ್ನು ಹೋಗಲಾಡಿಸಬೇಕು ಎಂಬ ಉದ್ದೇಶದಿಂದ. ಸೊಸೈಟಿಗಳಿಗೆ ದುಡ್ಡು ಹಾಕಿದರೆ ಹೋಗಿಯೇ ಬಿಡುತ್ತದೆಂದು ಸಾಮಾನ್ಯವಾಗಿ ಎಲ್ಲ ಜನರೂ ಹೆದರುತ್ತಿದ್ದಾರೆ. ಮಲ್ಟಿಪರ್ಪಸ್ ಸೊಸೈಟಿಗಳ ಅವಸ್ಥೆಯೂ ಅದೇ ರೀತಿಯಾಯಿತು. ಹೀಗಿದ್ದರೂ ಸರ್ಕಾರದವರು ಈಗಲೂ ಬೇರೆ ಬೇರೆ ಸೊಸೈಟಿಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಯೇ ಹೊರತು ಇರುವ ಸೊಸೈಟಿಗಳನ್ನು rejuvenate ಮಾಡುವುದಕ್ಕೆ ಪ್ರಯತ್ನ ಮಾಡುತ್ತಿಲ್ಲ; ಈ ಅಧಿಕಾರಗಳನ್ನು ಅವರು ಕೇಳುವುದು ನ್ಯಾಯವಾಗಿಯೇ ಇದೆ. ನಮ್ಮ ಪ್ರೋತ್ಸಾಹ ಅದಕ್ಕೆ ಇದೆ; ಆದರೆ, ಇರುವ ಅಧಿಕಾರವನ್ನು ಅವರು ಚಲಾಯಿಸುತ್ತಿದ್ದಾರೆಯೇ, ಸೊಸೈಟಿಗಳನ್ನು ಕಾಲಕಾಲಕ್ಕೆ ತನಿಖೆ ಮಾಡುತ್ತಿದ್ದಾರೆಯೇ, ತನಿಖೆಯ ರಿಪೋರ್ಟಿಗೆ ಮನ್ನಣೆ ದೊರೆಯುತ್ತಿದೆಯೇ ಎಂಬುದನ್ನು ನೋಡಿದರೆ ಬಹಳ ಮಟ್ಟಿಗೆ ನಿರಾಶೆ ಉಂಟಾಗುತ್ತದೆ. ಅನೇಕ ಸೊಸೈಟಿಗಳಲ್ಲಿ defalcation ಆಗಿರತಕ್ಕ ರಿಪೋರ್ಟ್ ಬಂದಿದೆ. ಆದರೂ action ತೆಗೆದುಕೊಳ್ಳುತ್ತಿಲ್ಲ, ಆಡಿಟ್ ರಿಪೋರ್ಟ್ ಬೇಕೆಂದು ಹೇಳುತ್ತಾರೆ. ಅದು ಬರುವ ಹೊತ್ತಿಗೆ ದುಡ್ಡೆಲ್ಲಾ ಪೂರ್ತಿಯಾಗಿ ಹೋಗಿರುತ್ತದೆ. ಒಂದುವೇಳೆ ಇಂಥ ಅಧಿಕಾರಗಳು ಬೇಕೆಂದೇ ಇಟ್ಟುಕೊಳ್ಳೋಣ. ಆದರೂ, ಸಾರ್ವಜನಿಕರ ದುಡ್ಡು ತಿಂದುಹಾಕಿರುವವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಈಗಿರತಕ್ಕ ಅಧಿಕಾರಗಳೇ ಸಾಲದೇ? ಕ್ರಿಮಿನಲ್ ಪ್ರೊಸೀಜರ್ ಕೋಡಿನಲ್ಲೇ ನಾನಾ ಅವಕಾಶಗಳಿಲ್ಲವೇ? ಈಗತಾನೆ ಎಂಟು ದಿವಸಗಳ ಹಿಂದೆ ನಡೆದ ಒಂದು ವಿಚಾರ ಹೇಳುತ್ತೇನೆ. ಅಪೆಕ್ಸ್ ಬ್ಯಾಂಕಿನಲ್ಲಿ 18,000 ರೂಪಾಯಿಗಳನ್ನು ತಿಂದುಹಾಕಿದ್ದಾರೆಂದು ವರ್ತಮಾನ ಬಂತು. ಆ ವರದಿ ಬಂದ ತಕ್ಷಣ, ಅದರ ಮೇಲೆ ಸರ್ಕಾರದವರೇ ಆಗಲಿ, ರಿಜಿಸ್ಟ್ರಾರ್‌ರವರೇ ಆಗಲಿ ಏನು action ತೆಗೆದುಕೊಂಡರು? ಯಾವ ಆಫೀಸಿನಲ್ಲೇ ಆಗಲಿ ಒಂದು ರೂಪಾಯಿ ಹೋದರೂ, ವಿಚಾರ ತಿಳಿದ ಕೂಡಲೆ ಆ ಮನುಷ್ಯನನ್ನು ಸಸ್ಪೆಂಡ್ ಮಾಡಿ ವಿಚಾರಣೆ ನಡೆಸಿದರೆ ಏನಾದರೂ ಗೊತ್ತಾಗುತ್ತದೆ. ಈಗ ಹಾಗೆ ಮಾಡುವುದಿಲ್ಲ. ಯಾವುದಾದರೂ ನಡೆಯಿತು ಎಂದರೆ ಅದನ್ನು ಮೂರುನಾಲ್ಕು ವರ್ಷ ತಳ್ಳಿಕೊಂಡು ಹೋಗುತ್ತಾರೆ. ಇದಕ್ಕೆ ಕಾರಣವೇನು? ಗ್ರಾಮಾಂತರ ಪ್ರದೇಶಗಳಲ್ಲಿನ ಸೊಸೈಟಿಗಳಲ್ಲಿರತಕ್ಕ ತಾಪತ್ರಯವಿರಲಿ, ಈ ಬೆಂಗಳೂರು ಮತ್ತು ಇತರ ಕೇಂದ್ರ ಬ್ಯಾಂಕುಗಳಲ್ಲಿ ನಡೆಯುತ್ತಿರತಕ್ಕ ಅವ್ಯವಸ್ಥೆಯೇನು, ಲಂಚ ರುಷುವತ್ತುಗಳೇನು, ಅಲ್ಲಿ ಯಾವ ಯಾವ ರೀತಿಯಲ್ಲಿ ದುರ್ವ್ಯಯ ನಡೆದಿದೆ, ಅದಕ್ಕೇನು ಕಾರ್ಯಕ್ರಮ ತೆಗೆದುಕೊಂಡರು ಎಂಬುದನ್ನು ಮಂತ್ರಿವರ್ಯರು ವಿಮರ್ಶೆ ಮಾಡಿ ಹೇಳಿದ್ದರೆ ಚೆನ್ನಾಗಿರುತ್ತಿತ್ತು.

4 P.M.

ನ್ಯಾಯವಾಗಿ ಸಾಕಾದಷ್ಟು ಅಧಿಕಾರ ಕೊಡುವುದಕ್ಕೆ ಅಡ್ಡಿಯಿಲ್ಲ. ಆದರೆ ಕೊಟ್ಟಾಗ್ಯೂ ಸರಿಯಾಗಿ ಅದನ್ನು ಚಲಾಯಿಸುತ್ತಾರೆಯೆ ಎಂದರೆ ಖಂಡಿತವಾಗಿಯೂ ಇಲ್ಲವೆಂದು ಹೇಳಬೇಕಾಗಿದೆ. ಏಕೆಂದರೆ, ಈಗಿರುವ ಪರಿಮಿತಿಯಲ್ಲೇ ಯಾವ ಅಧಿಕಾರವನ್ನೂ ಚಲಾಯಿಸುತ್ತಿಲ್ಲ. ಹಣಕಾಸಿನ ವಿಚಾರದಲ್ಲಿ ಒಂದು ಕಾಸು ಲೋಪವಾದರೂ ಆದ ದಿವಸವೇ ಏಕೆ ಕ್ರಮ ತೆಗೆದುಕೊಳ್ಳಕೂಡದು? ಸೊಸೈಟಿ ಇನ್ಸ್‌ಪೆಕ್ಟರು ತನಿಖೆ ಮಾಡಿದಾಗ ಅದರ ಮೇಲೆ ಏಕೆ ಕ್ರಮ ಕೈಕೊಳ್ಳಕೂಡದು? ಹಾಗೆ ಕ್ರಮ ಕೈಕೊಳ್ಳದೇಯಿದ್ದರ ಅದಕ್ಕೆ ಅಧಿಕಾರಿಗಳೇ ಬೇಕಾಗಿಲ್ಲ, ಇನ್ಸ್‌ಪೆಕ್ಟರ ಹುದ್ದೆಯೇ ಅನಾವಶ್ಯಕ. ಇನ್ಸ್‌ಪೆಕ್ಟರನ್ನಿಟ್ಟ ಮೇಲೆ ಎಲ್ಲಿ ಲೋಪವಾಯಿತೋ ಅಲ್ಲಿಗೆ ತಕ್ಷಣ ಹೋಗಿ ಕ್ರಮ ಕೈಕೊಳ್ಳಬೇಕು. ಉದಾಹರಣೆಗೆ, ಪೋಸ್ಟ್ ಆಫೀಸಿನಲ್ಲಿ ಇನ್ಸ್‌ಪೆಕ್ಟರುಗಳ ಸಹಾಯಕ್ಕೆ ಕ್ಲಾರ್ಕುಗಳಾಗಲಿ, ಇತರರಾಗಲಿ ಯಾರೂ ಇರುವುದಿಲ್ಲ. ಅವರಿಗೆ 200 ಪೋಸ್ಟ್ ಆಫೀಸುಗಳು ಸೇರಿರುತ್ತವೆ. ಒಂದು ಡಿಫಾಲ್ಕೇಷನ್ ಆದರೆ ಬೆಳಗಾಗುವುದರೊಳಗಾಗಿ ಸ್ಥಳಕ್ಕೆ ಹೋಗಿ ವಿಚಾರಣೆ ಮಾಡುತ್ತಿರುತ್ತಾರೆ. ಸೂಪರಿಂಟೆಂಡೆಂಟರು ಸಹ ಬಂದಿರುತ್ತಾರೆ. ಅಷ್ಟು ಜಾಗ್ರತೆ ಅವರು ಕ್ರಮ ಕೈಕೊಳ್ಳುವುದರಿಂದ ಅಲ್ಲಿ ಒಂದು ಕಾಸೂ ಸಹ ಲೋಪ ಬರುವುದಿಲ್ಲ. ಅದೇ ಇಲ್ಲಿ ಅಧಿಕಾರವಿದ್ದರೂ ದೂರು ಬಂದ ತಕ್ಷಣ ಇಲಾಖೆಯವರು ಕ್ರಮ ತೆಗೆದುಕೊಳ್ಳುವುದಿಲ್ಲ. ಇದರಿಂದ ಲೋಪವಾಗಲು ಕಾರಣವಾಗುತ್ತದೆ. ಅಲ್ಲದೆ ಸ್ಥಳೀಯ ಅಧಿಕಾರಿಗಳೇನಾದರೂ ಕ್ರಮ ಕೈಕೊಂಡರೆ ಒಂದು ಪ್ರಭಾವ ಬರುತ್ತದೆ, ಕಾರ್ಯಕ್ರಮ ತೆಗೆದುಕೊಳ್ಳಬೇಡಿ ಎಂದು ಮೇಲಿನಿಂದ ಸೂಚನೆ ಬರುತ್ತದೆ. ಇದರಿಂದ ಅಧಿಕಾರಿಗಳಿಗೆ ಉಭಯ ಸಂಕಟ. ಹಣ ತಿಂದು ಮೂರು ನಾಲ್ಕು ವರ್ಷಗಳಾದರೂ ಇಲ್ಲಿಯವರೆಗೂ ಅನೇಕ ಸಂದರ್ಭಗಳಲ್ಲಿ ವಿಚಾರಣೆಯೇ ಮಾಡಿಲ್ಲ; ಇಷ್ಟೇ ಅಲ್ಲ, ತಪ್ಪಿತಸ್ಥರಿಗೆ ಅಧಿಕಾರ

ಕೂಡ ತಪ್ಪಿಸಿಲ್ಲ. ಅವರು ಇರುವ ಸ್ಥಳದಲ್ಲೇ ಇದ್ದಾರೆ. ಈಗಿರುವ ಈ ಕಾನೂನು ಪ್ರಕಾರ ಕೆಲವು ಬದಲಾವಣೆಗಳನ್ನು ಮಾಡುವುದರಲ್ಲಿ ಅಷ್ಟಾಗಿ ಆಕ್ಷೇಪವಿಲ್ಲ. ಆದರೆ ವ್ಯವಸ್ಥೆ ಏನಾದರೂ ಉತ್ತಮವಾಗುತ್ತದೆಯೇ ಎಂದು ನೋಡಿದರೆ ಆಶಾದಾಯಕವಾಗಿ ಕಾಣುವುದಿಲ್ಲ. ಮೇಲೆ ಚಾಟಿ ತೆಗೆದುಕೊಂಡು ಹೊಡೆಯುವವರಿಲ್ಲದಿದ್ದರೆ ಏನೂ ಪ್ರಯೋಜನವಾಗುವುದಿಲ್ಲ. ಹಣಕಾಸಿನ ಛಪಾವಣೆಯಾಗುವಾಗ ತಕ್ಷಣ ಏಕೆ ಕ್ರಮ ತೆಗೆದುಕೊಳ್ಳಬಾರದು? ಇನ್ಸ್ಪೆಕ್ಟರು ತನಿಖೆ ಮಾಡಿ ಲೋಪಗಳನ್ನು ಕಂಡುಹಿಡಿಯುತ್ತಿಲ್ಲವೆ? ಅದರ ಮೇಲೆ ಏಕೆ ಕ್ರಮ ತೆಗೆದುಕೊಳ್ಳುತ್ತಿಲ್ಲ? ಈಗ ಮಲ್ಟಿಪರ್ಪಸ್ ಸೊಸೈಟಿಗಳನ್ನು ಪ್ರಾರಂಭಿಸಿ ಬೇಕಾದಷ್ಟು ಹಣ ಶೇಖರಿಸುತ್ತಿದ್ದಾರೆ. ಗೃಹ ಕೈಗಾರಿಕೆಗಳಿಗಾಗಿ ಒಂದೊಂದು ಹೋಬಳಿಯಲ್ಲೂ ಒಂದೊಂದು ಸೊಸೈಟಿಯಾಗಿದೆ, ಅದಕ್ಕೆ ಷೇರು ಕೊಡಿಸಿ ಎಂದು ಹೇಳುತ್ತಾರೆ. ಆ ಸೊಸೈಟಿಗಳನ್ನೇ ಉದ್ಧಾರ ಮಾಡುವುದರ ಬದಲು ಪುನಃ ಹೊಸದಾಗಿ ಒಂದೊಂದು ಸೊಸೈಟಿ ಸ್ಥಾಪಿಸುತ್ತಿದ್ದಾರೆ. ಸೊಸೈಟಿಗಳನ್ನೂ ಹೆಚ್ಚಿಸಿದರೆ ಕಾರ್ಯಸಾಧನೆಯಾಗುವುದಿಲ್ಲ. ಈಗ ಮಲ್ಟಿಪರ್ಪಸ್ ಸೊಸೈಟಿಗಳು ಪ್ರತಿಯೊಂದು ಭಾಗದಲ್ಲೂ ಇವೆ; ಹೊಸದಾಗಿ ಯಾವ ಸೊಸೈಟಿಯೂ ಬೇಕಾಗಿಲ್ಲ. ಒಂದು ಸೊಸೈಟಿಯೂ ಸರಿಯಾದ ಸ್ಥಿತಿಯಲ್ಲಿಲ್ಲ. ಒಂದೇ ಉದ್ದೇಶಕ್ಕಾಗಿ ನಾಲ್ಕಾರು ಸೊಸೈಟಿಗಳನ್ನು ಮಾಡುವುದರಲ್ಲಿ ಅರ್ಥವಿಲ್ಲ. ಇದರಿಂದ ಆಡಳಿತ ದಕ್ಷತೆಗೆ ಲೋಪ ಬರುತ್ತದೆ. ಅಲ್ಲದೆ ಈಗ ದಕ್ಷತೆ ಬಹಳ ಮಟ್ಟಿಗೆ ಕಡಮೆಯಾಗಿದೆ. ಆದ್ದರಿಂದ ಈ ಕಾನೂನುಗಳನ್ನು ತರುವುದಕ್ಕೆ ಮುಂಚೆ ಆಡಳಿತ ದಕ್ಷತೆ ಹೆಚ್ಚಿಸಲು ಏನು ಮಾಡಬೇಕೋ ಅದನ್ನು ಮಾಡುವುದು ಉತ್ತಮ. ಇಲ್ಲದಿದ್ದರೆ ಹೇಡಿಗಳ ಕೈಲಿ ಚಂದ್ರಾಯುಧ ಕೊಟ್ಟಹಾಗಾಗುತ್ತದೆ. ಬಡವ ಹಣ ಕಳೆದುಕೊಂಡು ಮನೆಗೆ ಹೋಗುತ್ತಿದ್ದಾನೆ, ನಡೆಯುವುದು ನಡೆದೇ ನಡೆಯುತ್ತಿದೆ. ಸೊಸೈಟಿಗಳಿಗೆ ಹಣ ಹಾಕಿದರೆ ಭಯವಿಲ್ಲವೆಂದು ಧೈರ್ಯವಿರುತ್ತದೆ, ಆದ್ದರಿಂದ ಹಣ ಹಾಕಿ ಎಂದು ಹೇಳಬಹುದು. ಆದರೆ ಹಣ ತಿಂದುಹಾಕಿದವರನ್ನು ಸುಮ್ಮನೆ ಬಿಟ್ಟುಬಿಟ್ಟರೆ ಏನು ಪುರುಷಾರ್ಥವೂ ಆಗುವುದಿಲ್ಲ. ಜನರಿಗಿರುವ ನಂಬಿಕೆ ತಪ್ಪಿಹೋಗುತ್ತದೆ. ಆರೀತಿಯಾಗಲು ಅವಕಾಶ ಕೊಡಬಾರದು ಎಂದು ಒತ್ತಿ ಹೇಳುತ್ತೇನೆ.

*ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ).—ಜಮೀನಿಲ್ಲದಿರುವ ವ್ಯವಸಾಯಗಾರರಿಗೇನಾದರೂ ಸಾಲ ಕೊಡುವುದಕ್ಕೆ ಈ ಮಸೂದೆಯಲ್ಲಿ ಅವಕಾಶ ಮಾಡಿದ್ದಾರೆಯೆ ಎಂಬುದನ್ನು ಮಂತ್ರಿಗಳು ಹೇಳಿದರೆ ಒಳ್ಳೆಯದು.

ಅಧ್ಯಕ್ಷರು.—ಮಸೂದೆಯನ್ನು ಓದಿ ನೋಡಿದರೆ ಗೊತ್ತಾಗುತ್ತದೆ.

ಶ್ರೀ ಎಸ್. ಗೋಪಾಲಗೌಡ.—ಸಹಕಾರ ಸಂಸ್ಥೆಗಳ ಕೆಲಸಗಳು ಸಮರ್ಪಕವಾಗಿ ನಡೆಯುವುದಕ್ಕೂ, ಈಗಿರತಕ್ಕಂಥ ಪರಿಸ್ಥಿತಿಯನ್ನು ಉತ್ತಮಗೊಳಿಸುವುದಕ್ಕೂ ಸರ್ಕಾರದವರು ಹೆಚ್ಚು ಹೆಚ್ಚಾಗಿ ಹಣ ಸಹಾಯಮಾಡಿ ಆ ಹಣಕಾಸಿನ ವಿಲೇವಾರಿಯ ಮೇಲೆ ಪರಿಣಾಮಕಾರಿಯಾದ ಹೆಚ್ಚಿನ ಒಂದು ಹತೋಟಿಯನ್ನು ತಂದಿರುವುದಕ್ಕೂ ಹಿಂದೆ ಇದ್ದಂಥ ಮಸೂದೆಯನ್ನು ಆಮೂಲಾಗ್ರವಾಗಿ ಈ ದಿನ ತಿದ್ದುಪಡಿ ಮಾಡಿ ತದನಂತರ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕೂಡ ಈ ಮಸೂದೆ ಹೋಗಿ ಕೆಲವು ತಿದ್ದುಪಡಿಗಳೊಡನೆ ಪುನಃ ಈ ಸಭೆಯ ಮುಂದೆ ಬಂದಿದೆ. ಹಿಂದೆ ಈ ಮಸೂದೆ ಪರಿಶೀಲನೆಗೆ ಬಂದಿದ್ದಾಗ ಈ ಸಭೆಯಲ್ಲಿ ಮಾನ್ಯ ಸದಸ್ಯರನೇಕರು ಕೆಲವು ಸಲಹೆಗಳನ್ನು ಕೊಟ್ಟಿದ್ದರು. ಅಂಥ ಸಲಹೆಗಳಲ್ಲಿ ಕೆಲವನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಇದರಲ್ಲಿ ಸೇರಿಸಿದ್ದಾರೆ. ಆದರೆ ಈಗಿರತಕ್ಕ ಮಸೂದೆಯಲ್ಲಿ ಕಾನೂನು ಪ್ರಕಾರ ಯಾವ ಆಸ್ತಿಪಾಸ್ತಿಯೂ ಇಲ್ಲದಿರುವ ವ್ಯವಸಾಯಗಾರರಿಗೆ ಯಾವುದೇ ರೀತಿಯಲ್ಲಿ ಈ ಸೊಸೈಟಿಗಳ ಮೂಲಕ ನೆರವನ್ನು, ಅವರ ಜವಾಬ್ದಾರಿ ಮೇಲೆ ಸಾಲವನ್ನು ಪಡೆದುಕೊಳ್ಳುವುದಕ್ಕೆ ಯಾವ ಅನುಕೂಲವನ್ನೂ ಕೂಡ ಕಲ್ಪಿಸಿಲ್ಲ. ನಮ್ಮಲ್ಲಿನ ಸಹಸ್ರಾರು ಜನ ವ್ಯವಸಾಯಗಾರರು ಭೂಮಿಹೀನರಾಗಿದ್ದ ಪಕ್ಷದಲ್ಲಿ ಅವರಿಗೆ ಸ್ವಂತ ಖಾತೆಯಿಲ್ಲದಿದ್ದ ಪಕ್ಷದಲ್ಲಿ ಅವರಿಗೆ ಇಂಥ ಸೊಸೈಟಿಗಳಿಂದ ಯಾವ ಸಾಲ ವಗೈರೆ ಅನುಕೂಲವನ್ನೂ ಕೂಡ ಪಡೆಯಲು ಅವಕಾಶವಿಲ್ಲ. ನಮ್ಮ ಪ್ರದೇಶದಲ್ಲಿ ನೋಡಿದರೆ ಬಹಳ ಜನರು ತಮ್ಮ ಸ್ವಂತ ಖಾತೆ ಜಮೀನು ಹೊಂದಿರುವುದಿಲ್ಲ. ಆದರೂ ಕೂಡ ಕೆಲವು ವೇಳೆ ಅವರು ಸಹಸ್ರಾರು ರೂಪಾಯಿಗಳ ವ್ಯವಹಾರವನ್ನು ಮಾಡುತ್ತಿರುತ್ತಾರೆ. ಅವರು ಕೆಲವು ತೋಟಗಳನ್ನು ಮಾಡುತ್ತಿರುತ್ತಾರೆ, ಗೇಣಿ ರೂಪವಾಗಿ ಜಮೀನು ವ್ಯವಸಾಯ ಕೂಡ ಮಾಡುತ್ತಿರುತ್ತಾರೆ. ಅಂಥವರು ಒಂದು ವರ್ಷಕ್ಕೆ ಸುಮಾರು 50 ಸಾವಿರ ರೂಪಾಯಿಗಳ ವ್ಯವಹಾರ ಮಾಡುತ್ತಾರೆ. ಆದರೆ ಸ್ವಂತ ಜಮೀನಿರುವುದಿಲ್ಲ. ಅಂಥ ಸಂದರ್ಭಗಳಲ್ಲಿ ಸಹಕಾರಿ ಪದ್ಧತಿ ಮೇಲೆ ಅನೇಕ ವರ್ಗದ, ಕೈಗಾರಿಕೆಗಳ ಬೇರೆ ಬೇರೆ ಕ್ಷೇತ್ರಗಳಲ್ಲಿರುವ ಜನರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸಲೋಸುಗ ವೈಯಕ್ತಿಕವಾದ ಸಂಸ್ಥೆಗಳನ್ನು ಅವರಿಗಾಗಿ ಮಾಡಿ, 'ಅವರು ತಮ್ಮ ಜೀವನವನ್ನು ಉತ್ತಮಪಡಿಸಿಕೊಳ್ಳಲಾರರು ಮತ್ತು ಖಾಸಗಿ ಜನರಿಂದ ಸಾಲ ತೆಗೆದುಕೊಂಡು ಆ ವ್ಯವಹಾರದಲ್ಲಿ ಸಿಕ್ಕಿ ಒದ್ದಾಡುತ್ತಾರೆ,' ಎಂದು ಅದನ್ನು ತಪ್ಪಿಸಿ, ಸಹಕಾರ ಪದ್ಧತಿಯ ಮೇಲೆ ನೂರಾರು ಜನರು ಸೇರಿ ಪರಸ್ಪರ ಸಹಾಯ ಸಿಕ್ಕುವಂತೆ ಮಾಡಬೇಕು ಎಂಬ ಒಂದು ತತ್ವವನ್ನು ಅನುಸರಿಸಿ ಹೆಚ್ಚು ಹಣ ಸಹಾಯವನ್ನು ಈ ಸಂಸ್ಥೆ ಮೂಲಕ ಮಾಡಬೇಕೆಂದು ಸರ್ಕಾರ ಈಗ ಈ ಮಸೂದೆಯನ್ನು ತಂದಿರುವುದನ್ನು ನಾವು ಸ್ವಾಗತಿಸುತ್ತೇವೆ. ಆದರೆ ಎಲ್ಲರೂ ನಮ್ಮ ದೇಶದಲ್ಲಿ ಭೂಮಿಯನ್ನು ಹೊಂದಿರುವವರೇ ಇದ್ದಾರೆಯೇ ಮತ್ತು ಆಸ್ತಿಪಾಸ್ತಿಗಳನ್ನು ಹೊಂದಿರುವವರೇ ಇದ್ದಾರೆಯೇ ಎಂದು ನೋಡಿದರೆ ಕೆಲವು ಜನರ ಸ್ಥಿತಿ ಸ್ವಲ್ಪ ಚಿಂತಾಜನಕವಾಗಿದೆ. ಅಂಥ ಸಂದರ್ಭದಲ್ಲಿ ಅವರು ಸರ್ಕಾರದ ಮುಖಾಂತರ ಹಣ ಕೊಡುವುದನ್ನು ಪಡೆದುಕೊಳ್ಳುವುದಕ್ಕೆ ಈ ಮಸೂದೆಯ ಪ್ರಕಾರ ಯಾವ ಒಂದು ಅನುಕೂಲವೂ ದೊರೆಯುವುದಿಲ್ಲ. ಇಂಥವರಿಗೆ ಈ ಮಸೂದೆಯಿಂದ ಸಹಾಯ ಸಿಕ್ಕುವಂತಿಲ್ಲ. ಆದ್ದರಿಂದ ಅಂಥ ಒಂದು ಪ್ರಾವಿಷನ್ ಮಾಡಿ ಎಲ್ಲಿ ರಿಜಿಸ್ಟ್ರಾರ್‌ರವರು ಮತ್ತು ಸಂಬಂಧಪಟ್ಟ ಕೋ-ಆಪರೇಟಿವ್ ಸೊಸೈಟಿಯನ್ನು ನಡೆಸಿಕೊಂಡು ಹೋಗುವ ಕಾರ್ಯಕಾರಿ ಸಮಿತಿಯವರು, ಡೈರೆಕ್ಟರುಗಳು ಅಂಥ ಸದಸ್ಯರಲ್ಲಿ ಯಾರಿಗಾದರೂ ಸಹಾಯವನ್ನು ಮಾಡಬಹುದೆಂದು ಅಭಿಪ್ರಾಯಪಟ್ಟರೆ ಆ ಸಂದರ್ಭದಲ್ಲಾದರೂ ಕೂಡ ಯಾವುದೇ ಭೂಮಿಯನ್ನು ಅಥವಾ ಆಸ್ತಿಯನ್ನು ಅಡವಿಟ್ಟುಕೊಳ್ಳದೆ, ಅದರ ಮೇಲೆ ಛಾರ್ಜ್ ಕ್ರಿಯೇಟ್ ಮಾಡದೆ, ಸಾಲ ಕೊಟ್ಟು ವಸೂಲು ಮಾಡತಕ್ಕ ಒಂದು ಅವಕಾಶವನ್ನು ಕಲ್ಪಿಸುವುದು ಈ ಸಂದರ್ಭದಲ್ಲಿ ಬಹಳ ಅಗತ್ಯವೆಂದು ಹೇಳುತ್ತೇನೆ.

*ಡಾ॥ ಆರ್. ನಾಗನಗೌಡ (ವ್ಯವಸಾಯದ ಇಲಾಖಾ ಮಂತ್ರಿಗಳು).—ಸ್ವಾಮಿ, ಈಗ ಮಾತನಾಡಿದವರ ಪೈಕಿ ಶ್ರೀಮಾನ್ ಹುಚ್ಚೇಗೌಡರು

(ಡಾ॥ ಆರ್. ನಾಗನಗೌಡ.)

'ನಿಮಗಿರುವ ಅಧಿಕಾರದಲ್ಲಿ ಎಷ್ಟು ಚಲಾವಣೆ ಮಾಡುತ್ತಿದ್ದೀರಿ' ಎಂದು ಕೇಳಿದರು. ಅಕ್ಟಿನ ಪ್ರಕಾರ ಎಫೆಕ್ಟಿವ್ ಸ್ಟೆಪ್ಸ್ ತೆಗೆದುಕೊಳ್ಳುವುದಕ್ಕಾಗಿ ಸರಿಯಾದ ಪ್ರಾವಿಷನ್ ಇರಲಿಲ್ಲವೆಂದೇ ಈ ಮಸೂದೆಯನ್ನು ತಂದಿದೆ. ಸರ್‌ಛಾರ್ಜ್ ಸೆಕ್ಷನ್‌ನಲ್ಲಿ ಈಗ ಒಂದು ಬದಲಾವಣೆಯನ್ನು ಸಜೆಸ್ಟ್ ಮಾಡುತ್ತಿದ್ದೇವೆ. ಇಷ್ಟು ದಿವಸಗಳವರೆಗೂ ಏನೇ ಸರ್‌ಛಾರ್ಜ್ ಮಾಡಿದರೂ ಹದಿನಾಲ್ಕರಲ್ಲಿ ಹದಿಮೂರನ್ನು ಎಫೆಕ್ಟಿವ್ವಾಗಿ ಮಾಡಲು ಈಗಿರುವ ಪ್ರಾವಿಷನ್ ಪ್ರಕಾರ ನಮಗೆ ಸಾಧ್ಯವಾಗಿರಲಿಲ್ಲ. ಈಗ ಇರುವ ಅವಕಾಶದ ಪ್ರಕಾರವೇ ಚೆನ್ನಾಗಿ ಕೆಲಸಮಾಡಿಲ್ಲವೆಂದು ಹೇಳಿದರು. ಈಗ ಸದ್ಯಕ್ಕೆ ಮೂರು ಸೆಂಟ್ರಲ್ ಬ್ಯಾಂಕ್ ಏರ್ಪಾಡು ಮಾಡಿದ್ದೇವೆ, ಲಕ್ಷಾಂತರ ರೂಪಾಯಿಗಳನ್ನು ಕೊಟ್ಟಿದ್ದೇವೆ. ಅದರಲ್ಲಿ ಎರಡು ಬ್ಯಾಂಕುಗಳವರು ಈ ದಿವಸ ಪೂರ್ಣವಾಗಿ ತಮ್ಮ ಷಾರ್ಟ್ ಟರ್ಮ್ ಲೋನ್ ಏನಿತ್ತೋ ಅದನ್ನೆಲ್ಲಾ ಕ್ಲಿಯರ್ ಮಾಡಿದ್ದಾರೆ; ಮೂರನೆಯ ಬ್ಯಾಂಕಿನವರೂ ಕೂಡ ಕ್ಲಿಯರ್ ಮಾಡಿದ್ದಾರೆಂದು ಗೊತ್ತಾಗಿದೆ. ಆದಕಾರಣ ಕೆಲಸ ಚೆನ್ನಾಗಿ ಮಾಡುತ್ತಿದ್ದೇವೆಂಬುದು ಗೊತ್ತಾಗುತ್ತದೆ. ಅನೇಕ ಕೇಸುಗಳನ್ನೂ ಸಹ ಮಾಡಿದ್ದೇವೆ, ಛಾರ್ಜಸ್ ಸಹ ಫ್ರೇಂ ಮಾಡಿದ್ದೇವೆ, ಆಕ್ಷನ್ ತೆಗೆದುಕೊಳ್ಳುತ್ತಲೂ ಇದ್ದೇವೆ. ಆಡಿಟ್ ಆಗದೆ ಸ್ವಲ್ಪ ಕಷ್ಟವಾಗಿತ್ತು. ಈಗ ಆಡಿಟ್ ಇಲಾಖೆ ಏರ್ಪಾಡಾದ ಮೇಲೆ ಮೂರು ಸಾವಿರ ಸೊಸೈಟಿ ಆಡಿಟ್ ಮಾಡಿಸುತ್ತಿದ್ದೇವೆ. ಸ್ವತಂತ್ರವಾದ ಆಡಿಟ್ ಇಲಾಖೆ ಇರುವುದರಿಂದ ಆಡಿಟರುಗಳು ಯಾವ ಇನ್‌ಫ್ಲುಯೆನ್ಸಿಗೂ ಒಳಗಾಗದೆ ಕೆಲಸ ಮಾಡುತ್ತಿದ್ದಾರೆ. ಅದರಮೇಲೆ ಚಾರ್ಜ್, ವಿಚಾರಣೆ ಆ ದಿವಸದಿಂದ ಜರುಗಿಸುತ್ತಲೇ ಇದ್ದೇವೆ. ವಿಚಾರಣೆಯಾಗುತ್ತಿರುವಾಗ ತಪಶೀಲನ್ನು ಕೊಟ್ಟರೆ ಚೆನ್ನಾಗಿರುವುದಿಲ್ಲವೆಂದು ಅದನ್ನು ಬಿಟ್ಟಿದ್ದೇನೆ.

ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ—ಅನುಸೂಚಿತಜಾತಿಗಳು).—ಅಷ್ಟು ಮೊಬಲಗು ಡಿಫಾಲ್ಕೇಷನ್ ಆಗಿದೆ ಎಂದು ಹೇಳಿದ ಮೇಲೆ, ಸಂಬಂಧಪಟ್ಟ ಮನುಷ್ಯನನ್ನು ಸಸ್ಪೆನ್ಷನ್‌ನಲ್ಲಿ ಏಕೆ ಇಡಲಿಲ್ಲ ಎಂಬ ಅಂಶವನ್ನು ಎತ್ತಿದ್ದಾರೆ.

ಡಾ॥ ಆರ್. ನಾಗನಗೌಡ.—ಈಗ 15 ದಿವಸದ ಒಳಗೆ ಆಗಿದೆ. ಅದಕ್ಕೆ ಸಂಬಂಧಪಟ್ಟವರೊಬ್ಬರು ಇನ್ನೂ ಸಿಕ್ಕಿಲ್ಲ ಎಂದು ಕೂಡ ಗೊತ್ತಾಗಿದೆ. ವಿಚಾರ ಮಾಡಿದ್ದೇನೆ. ಅದರ ತನಿಖೆ ಚೆನ್ನಾಗಿ ಮಾಡುತ್ತಾ ಇದ್ದೇವೆ. ಅದಕ್ಕೆ ಯಾರು ಯಾರು ಸಂಬಂಧಪಟ್ಟಿದ್ದಾರೋ ಅವರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಪೂರ್ಣವಾಗಿ ಯಾವುದೂ ಗೊತ್ತಾಗದೇ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಶ್ರೀಮಾನ್ ಗೋಪಾಲಗೌಡರು landless agriculturistsಗೆ ಯಾವ ಆಧಾರದ ಮೇಲೆ ಸಾಲ ಕೊಡುತ್ತೀರಿ ಎಂದು ಕೇಳಿದರು. ಗೋಪಾಲಗೌಡರು ಆ ರೀತಿ ಕೇಳುವುದು ಸ್ವಲ್ಪ ಆಶ್ಚರ್ಯವೇ ಆಗಿದೆ. ಈಗ 50 ಸಾವಿರ ರೂಪಾಯಿಗಳವರೆಗೂ ವ್ಯವಸಾಯ ಮಾಡುವಂಥ ರೈತರು ಇದ್ದಾರೆ. ಅವರು ಯಾವ ಯಾವ ವಿಧವಾದ ಭೂಮಿಯೂ ಇಲ್ಲ ಎಂದು ಹೇಳಿದರೆ ಅವರಿಗೆ ಸಾಲ ಕೊಡುವುದಕ್ಕೆ ನಾವು ಒಂದು ಪ್ರೊವಿಜನ್ ಮಾಡಿದ್ದೇವೆ. ಈ ಕೋ-ಆಪರೇಟಿವ್ ಸೊಸೈಟಿಗಳ ಮೂಲ ತತ್ತ್ವ ತಮಗೆ ಗೊತ್ತಾದ ಹಾಗೆ 'One for all and all for one' ಎನ್ನುವಂತೆ ಪರಸ್ಪರ ಸಹಾಯ ಮಾಡಬೇಕು ಎನ್ನುವುದೇ ಈ ಕೋ-ಆಪರೇಟಿವ್ ಸೊಸೈಟಿಗಳ ತತ್ತ್ವ. ನನ್ನ ಸ್ವಂತ ಅನುಭವದಲ್ಲಿ ನನಗೆ ಗೊತ್ತಿರುವಹಾಗೆ ಈ landless agriculturists ಎಂದು ಯಾರಿದ್ದಾರೋ ಅವರ ಯೋಗ್ಯತೆಯಲ್ಲಿ ನಂಬಿಕೆ ಇದೆ ಎಂದು ಕಂಡುಬಂದರೆ ಅಂಥವರಿಗೆ ಭೂಮಿ ಆಗಲಿ, ಇನ್ನಾವುದಾದರೂ ಆಸ್ತಿ ಆಗಲಿ ಇಲ್ಲದೇ ಇದ್ದರೂ ಕೂಡ ಪರಿಚಯ ಇರುವ ಸೊಸೈಟಿಗಳಲ್ಲಿ ಬೇಕಾದಷ್ಟು ಸಾಲ ಸಿಕ್ಕುತ್ತದೆ. ಈ ರೀತಿ ಕೊಡುವುದಕ್ಕೆ ಏನು ಆಧಾರ ಎಂದರೆ ಇತರ ಸದಸ್ಯರು 'ಅವರು ವಾಪಸು ಕೊಡುತ್ತಾರೆ, ಪರವಾಗಿಲ್ಲ ಕೊಡಿ' ಎಂದು ಹೇಳಿ Surety ನಿಂತರೆ ಸಾಕು. ನಮ್ಮಲ್ಲಿ ಭೂಮಿ ಮತ್ತು ಆಸ್ತಿ ಇಲ್ಲದಂಥ ರೈತರು ಅನೇಕಮಂದಿ ಇದ್ದಾರೆ. ಅವರೇ ಹೆಚ್ಚುಮಂದಿ ಇದ್ದಾರೆ ಎಂದರೂ ತಪ್ಪಾಗುವುದಿಲ್ಲ. ಅಂಥವರಿಗೆ ಸಹಕಾರ ಸಂಘ ಎಲ್ಲಿ ಚೆನ್ನಾಗಿ ಕೆಲಸ ಮಾಡುತ್ತದೆಯೋ ಅಂಥ ಕಡೆಗಳಲ್ಲಿ ಸಹಾಯ ಮಾಡುವುದಕ್ಕೆ ಯಾವ ವಿಧವಾದ ಕಷ್ಟವೂ ಇರುವುದಿಲ್ಲ. ಆದ್ದರಿಂದ ಮ್ಯಾನೇಜಿಂಗ್ ಕಮಿಟಿ ಮೆಂಬರುಗಳು, ಸೆಕ್ರೆಟರಿ, ಪ್ರೆಸಿಡೆಂಟ್ ಆದವರು ಆಯಾ ಸೊಸೈಟಿಗಳಲ್ಲಿ ನಿಸ್ವಾರ್ಥ ಬುದ್ಧಿಯಿಂದ, ಜನರ ಹಿತಕ್ಕಾಗಿ ಕೆಲಸ ಮಾಡುವುದಕ್ಕೆ ಮನಸ್ಸು ಮಾಡುವುದು ಒಳ್ಳೆಯದು. Short-term Credit ಸೊಸೈಟಿಯೊಳಗೆ ಯಾವ ಮನುಷ್ಯನಿಗೇ ಆಗಲಿ ಅವನಿಗೆ ಆಧಾರ ಇರಲಿ, ಇಲ್ಲದೇ ಇರಲಿ ಅವನು ಗೇಣಿಗೆ ತೆಗೆದುಕೊಂಡಿರತಕ್ಕ ಭೂಮಿಯ ಮೇಲೆ, ಎರಡು ಸಾವಿರ ರೂಪಾಯಿಗಳವರೆಗೂ ಸಾಲ ಕೊಡುವುದನ್ನು ನೋಡಿದ್ದೇನೆ. ಆದರೆ ಅದನ್ನು ಅವನಿಗೆ ಮೊದಲೇ ಕೊಟ್ಟುಬಿಡುವುದಿಲ್ಲ. ಇವೊತ್ತಿನ ದಿವಸ ಅವನಿಗೆ ಬಿತ್ತನೆ ಬೀಜ ಬೇಕು ಎಂದರೆ ಅದಕ್ಕೆ ಎಷ್ಟು ಬೇಕಾಗುತ್ತದೆಯೋ ಅಷ್ಟು ಹಣ ಕೊಡುತ್ತಾರೆ. ಅದೇ ರೀತಿ ಗೊಬ್ಬರಕ್ಕೆ ಎಷ್ಟುಬೇಕು ಎನ್ನುತ್ತಾನೆಯೋ ಅಷ್ಟು ಕೊಡುತ್ತಾರೆ. ಆದಕಾರಣ ಕೋ-ಆಪರೇಟಿವ್ ಸೊಸೈಟಿಯವರಿಗೆ ಒಬ್ಬ ರೈತನ ಮೇಲೆ ಚೆನ್ನಾಗಿ ನಿಗಾ ಇಟ್ಟು, ಆತನಿಗೆ ಎಷ್ಟು ಬೇಕೋ ಅಷ್ಟು ದುಡ್ಡು ಕೊಟ್ಟು ಸಹಾಯ ಮಾಡುವುದಕ್ಕೆ ಅವಕಾಶವುಂಟು. ಇಂಥ ಸೊಸೈಟಿಗಳನ್ನು ಇನ್ನು ಹೆಚ್ಚಾಗಿ ಜರುಗಿಸುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದೇವೆ. ಈ ಸಹಕಾರ ಪತ್ರದಲ್ಲಿ ನಂಬಿಕೆ ಇಟ್ಟು ಕೆಲಸಮಾಡುವುದಕ್ಕೆ ಸಿದ್ಧವಾಗಿದ್ದರೆ ಜನಗಳಿಗೆ ಸಹಾಯವನ್ನೊದಗಿಸಲು ಬೇಕಾದಷ್ಟು ಅವಕಾಶ ಇದೆ.

This may be taken into consideration.

MR. SPEAKER.—The question is:

"That the Mysore Co-operative Societies (Amendment) Bill, 1955, as passed by the Legislative Council, be taken into consideration."

The motion was adopted.

MR. SPEAKER.—Now, we shall take the Bill clause by clause. Clause 2. There is an amendment in the name of Sri Bheemappa Naik.

*SRI A. BHEEMAPPA NAIK.—I move:

"That in Clause 2, the words commencing from 'and' after the

words 'sanction of Government' in line 5, and ending with '"one thousand rupees" shall be added' in line 9, shall be deleted."

ಸ್ವಾಮಿ, ಮೈಸೂರು ಕೋ-ಆಪರೇಟಿವ್ ಸೊಸೈಟಿ ಆಕ್ಟಿನ ಹಿಂದಿನ 7ನೇ ಸೆಕ್ಷನಲ್ಲಿ ಒಂದು ಕ್ಲಾಸು ಯಾವ ಸದಸ್ಯನೇ ಆಗಲೀ 1,000 ರೂಪಾಯಿಗಳಿಗೆ ಮೇಲ್ಪಟ್ಟು ಸೊಸೈಟಿಯಲ್ಲಿ ಷೇರು ತೆಗೆದುಕೊಳ್ಳ ಕೂಡದು ಎಂದು ಹೇಳಿ ಇತ್ತು. ಅದು ಈಗಿನ ಕಾಲಕ್ಕೆ ಅಷ್ಟು ಅನುಕೂಲವಾದುದಲ್ಲ ಎಂದು ಹೇಳಿ ಅದನ್ನು 10 ಸಾವಿರ ರೂಪಾಯಿಗಳವರೆಗೂ ಹೆಚ್ಚಿಸ ಬೇಕೆಂದು ಸರ್ಕಾರದವರು ಒಂದು ತಿದ್ದುಪಡಿಯನ್ನು ತಂದರು. ಅದರ ಉದ್ದೇಶವಾದರೂ ಇಷ್ಟೇ. ಈಗ ಉದಾಹರಣೆಗೆ ಪಾಂಡವಪುರದಲ್ಲಿ ಒಂದು ಸೊಸೈಟಿ ಯಲ್ಲಿ ಸಾಲ ತೆಗೆದುಕೊಂಡು ಒಂದು ಯಾವುದಾ ದರೂ ಕೈಗಾರಿಕೆ ಸ್ಥಾಪಿಸಬೇಕೆಂದು ಇಷ್ಟಪಟ್ಟಲ್ಲಿ ಅಂತಹ ಮನುಷ್ಯ 10 ಸಾವಿರ ರೂಪಾಯಿಗಳ ವರೆಗೂ ಷೇರು ತೆಗೆದುಕೊಳ್ಳುವುದಕ್ಕೆ ಅವಕಾಶವಿರಲಿ ಎಂಬುದೇ ಆಗಿದೆ. ಅದರೆ ಕೆಲವು ಸದಸ್ಯರು ಈ ರೀತಿ ಮಾಡುವುದರಿಂದ ಬಂಡವಾಳಷಾಹಿಗಳಿಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ ಎಂಬ ವಾದವನ್ನು ಮುಂದಿಟ್ಟರು. ಈ ಕೋ-ಆಪರೇಟಿವ್ ಸೊಸೈಟಿಗಳಲ್ಲಿ ಯಾವ ಮನುಷ್ಯನಿಗೇ ಆಗಲಿ 1,000 ಷೇರುಗಳಿರಲಿ, ಅಥವಾ ಒಂದೇ ಒಂದು ಷೇರು ಇರಲಿ ಆತನಿಗೆ ಇರತಕ್ಕದ್ದು ಒಂದು ಓಟು. ಆದ್ದರಿಂದ ಆತ powerful ಆಗಿರುವುದಕ್ಕೆ ಅವಕಾಶವಿಲ್ಲ. ಇದರಲ್ಲಿ ಎಷ್ಟು ಹಣ ಕೊಟ್ಟರೆ, ಅಷ್ಟು ಹಣ ಸಾಧಾರಣ ಜನರಿಗೆ ಬೇರೆ ವಿಧದಲ್ಲಿ ಕೊಡುವುದಕ್ಕೆ ಅನುಕೂಲವಾಗುತ್ತದೆ, ಕೈಗಾರಿಕೆಗಳನ್ನು ಬೆಳೆಸುವುದಕ್ಕೆ ಅನುಕೂಲವಾಗುತ್ತದೆ, ಎಂಬ ಒಂದು ದೃಷ್ಟಿಯಿಂದ ಈ ತಿದ್ದುಪಡಿಯನ್ನು ತಂದರು. ಮತ್ತು ಈಚೆಗೆ All-India Co-operative Conference ಆದಾಗ ಒಂದು ಪತ್ರವನ್ನು ಒಪ್ಪಿಕೊಂಡಿದ್ದಾರೆ. ಅದೇನೆಂದರೆ, 'ಸರ್ಕಾರದವರು partnership ಮೇಲೆ ಕೋ-ಆಪರೇಟಿವ್ ಸೊಸೈಟಿಗಳಲ್ಲಿ ಷೇರು ತೆಗೆದುಕೊಳ್ಳಬಹುದು' ಎಂಬುದೇ ಆಗಿದೆ. ಸೊಸೈಟಿಯವರು ಸರ್ಕಾರದಿಂದ ಹಣಪಡೆಯ ಬೇಕೆಂದು ಅಪೇಕ್ಷೆಪಟ್ಟಲ್ಲಿ 10 ಸಾವಿರ ರೂಪಾಯಿಗಳ ವರೆಗೂ ಷೇರು ರೂಪದಲ್ಲಿ ಪಡೆಯುವುದಕ್ಕೆ ಅವಕಾಶ ವಾಗುತ್ತದೆ. ಆ ದೃಷ್ಟಿಯಿಂದ ನಾನು ತಂದಿರುವ ಈ ತಿದ್ದುಪಡಿ ಏನಿದೆ ಇದನ್ನು ಸರ್ಕಾರದವರು ಮೊದಲೇ ತಂದಿದ್ದರು. ಆದರೆ ಇದು ಸೆಲೆಕ್ಟ್ ಕಮಿಟಿ ಯಲ್ಲಿ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ 1,000 ರೂಪಾಯಿ ಹಿಂದೆ ಇದ್ದಂತೆಯೇ ಇರಬೇಕು ಎಂದು ಹೇಳಿ ಮಾಡಿದ್ದಾರೆ, ಇದರಿಂದ ಸರ್ಕಾರದವರು ಯಾವ ಉದ್ದೇಶದಿಂದ ಈ ಮಸೂದೆಯನ್ನು ತಂದಿದ್ದರೋ ಆ ಉದ್ದೇಶಕ್ಕೆ ಧಕ್ಕೆ ಬರುತ್ತದೆ ಮತ್ತು ಈಗಿನ ಸಹಕಾರ ತತ್ವದ ಮೇಲೆ ಸಂಸ್ಥೆಗಳನ್ನು ಕಟ್ಟುವ ಒಂದು ತತ್ವಕ್ಕೂ ಕೂಡ ಧಕ್ಕೆ ಬರುತ್ತದೆ. ಆದ್ದರಿಂದ 10,000 ರೂಪಾಯಿಗಳವರೆಗೂ ಯಾರಾದರೂ ಷೇರುಗಳನ್ನು ಪಡೆಯಲು ಅಪೇಕ್ಷೆಪಟ್ಟರೆ ತೆಗೆದುಕೊಳ್ಳಬಹುದು ಎಂದು ತಿದ್ದುಪಡಿ ಮಾಡಬೇಕಾದದ್ದು ಬಹಳ ಅಗತ್ಯ. ಇಂಥಾದ್ದೇ ಒಂದು ಪ್ರೊವಿಜನ್, ಬೊಂಬಾಯಿ ಆಕ್ಟ್‌ನಲ್ಲೂ ಕೂಡ ಇದೆ. ಅದು ಜಾರಿಯಲ್ಲಿದೆ. ಆ ದೃಷ್ಟಿಯಿಂದ ಸರ್ಕಾರದವರು ಈ ನನ್ನ ತಿದ್ದುಪಡಿಯನ್ನು ಒಪ್ಪಿಕೊಳ್ಳಬೇಕೆಂದು ಅವರನ್ನು ಪ್ರಾರ್ಥಿಸುತ್ತೇನೆ.

Mr. SPEAKER.—Amendment moved:

"That in Clause 2, the words commencing from 'and' after the words 'sanction of Government' in line 5, and ending with '"one thousand rupees" shall be added' in line 9, shall be deleted."

ಡಾ॥ ಆರ್. ನಾಗನಗೌಡ.—ಇದು ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಅಂಗೀಕಾರವಾದ ತರುವಾಯ ರೂರಲ್ ಕ್ರೆಡಿಟ್ ಸರ್ವೇ ರಿಪೋರ್ಟ್ ಸಹ ಬಂತು. ಅದರಲ್ಲಿ ಸೂಚನೆಮಾಡಿರುವ ಪ್ರಕಾರ ಸಹಕಾರ ತತ್ವದಮೇಲೆ ಜನರಿಗೆ ಆದಷ್ಟು ಸಹಾಯ ಮಾಡ ಬೇಕು ಮತ್ತು ಧಾನ್ಯಗಳ ಬೆಳವಣಿಗೆಗೆ ಸಾಲಕೊಡುವುದಕ್ಕೆ ಈ ಮೂಲಕ ಏರ್ಪಾಡು ಮಾಡಬೇಕೆಂದಿರುವುದರಿಂದ 1,000 ರೂಪಾಯಿಗಳವರೆಗೆ ಲಿಮಿಟ್ ಮಾಡಿದರೆ ಬಹಳ ಕಷ್ಟವಾಗುತ್ತದೆ. ಆದಕಾರಣ ಮೊದಲು ನಾವು ಏನು ತಿದ್ದುಪಡಿ ಮಾಡಿದ್ದೆವೋ ಅದೇ ಪ್ರಕಾರ ಇದ್ದರೆ ಒಳ್ಳೆಯದು. ಈಗ ಶ್ರೀಮಾನ್ ಭೀಮಪ್ಪ ನಾಯಕರು ತಂದಿರುವ ತಿದ್ದುಪಡಿ ಸೂಕ್ತವಾಗಿದೆ, ಇದನ್ನು ನಾವು ಒಪ್ಪಿದ್ದೇವೆ.

Mr. SPEAKER.—The question is:

"That in Clause 2, the words commencing from "and" after the words "sanction of Government", in line 5 and ending with, '"one thousand rupees" shall be added', in line 9 shall be deleted."

The motion was adopted.

Mr. SPEAKER.—The question is:

"That Clause 2 as amended stand part of the Bill".

The motion was adopted.

Clause 2 as amended was added to the Bill.

Mr. SPEAKER.—Clauses 3 to 13 there are no amendments. The question is:

"That clauses 3 to 13 stand part of the Bill".

The motion was adopted.

Clauses 3 to 13 were added to the Bill.

Mr. SPEAKER.—Clause 14: There is an amendment to Clause 14 by Sri A. Bheemappa Naik.

***Sri A. BHEEMAPPA NAIK.**—I move:

"For Clause 14 the following shall be substituted:—

14. Substitution of new section for section 49 of Mysore Act LII

(SRI A. BHEEMAPPA NAIK.)

of 1948.—For section 49 of the principal Act, the following section shall be substituted, namely :—

"49. Surcharge.—(1) Where, in the course of an audit under section 20 or an enquiry under section 39 or an inspection under section 40 or the winding up of a society, it appears that any person who has taken part in the organisation or management of the society or any past or present president, secretary, member of the managing committee or officer or any member of the staff of the society has misapplied or retained or become liable or accountable for any money or property of the society or has been guilty of misfeasance or breach of trust in relation to the society, the Registrar may, on a report received from the officer conducting the audit or holding the inquiry or inspection, or of the liquidator or on an application received from any creditor or contributory or the managing committee of the society or of his own motion, examine into the conduct of such person and after giving reasonable opportunity to the person concerned to submit his explanation, make an order requiring him to repay or restore the money or property or any part thereof respectively with interest at such rate as the Registrar thinks just or to contribute such sum to the assets of the society by way of compensation in regard to the misapplication, retainer, misfeasance or breach of trust as the Registrar thinks just.

(2) The order of the Registrar under sub-section (1) shall be final unless it is set aside by the Government on application made.

(3) Any sum ordered under this section to be repaid to a society or recovered as a contribution to its assets may be recovered on a requisition being made in this behalf to the Deputy Commissioner by the Registrar in the same manner as arrears of land revenue or in the manner provided in section 64.

(4) This section shall apply notwithstanding such person or officer may have incurred criminal liability by his Act.''

ಹಿಂದೆ ಯಾವುದಾದರೂ ಒಂದು ಸಂಸ್ಥೆಯಲ್ಲಿ ಹಣ ದುರುಪಯೋಗಪಡಿಸಿದ್ದರೆ ಆ ದಿವಸ ಯಾರು ಯಾರು ಆ ಸಂಸ್ಥೆಯಲ್ಲಿ ಇದ್ದರೋ ಅವರೆಲ್ಲರೂ ಆ ಹಣಕ್ಕೆ ಜವಾಬ್ದಾರರಾಗುತ್ತಾರೆ. ಸಾರ್ವಜನಿಕರ ಸ್ವತ್ತನ್ನು ಸರಿಯಾಗಿ ಕಾಪಾಡತಕ್ಕದ್ದು ನ್ಯಾಯ ಮತ್ತು ಅದಕ್ಕೆ ಏನೇನು ಬಂದೋಬಸ್ತು ಬೇಕೋ ಅವುಗಳನ್ನೆಲ್ಲಾ ಮಾಡಬೇಕಾದದ್ದು ಅಗತ್ಯ. ಹಿಂದಿನ ಆಕ್ಟ್‌ನಲ್ಲಿ ಒಂದು ಕ್ಲಾಸು ಇದೆ. ಏನೆಂದರೆ, ಆ ಸಂಸ್ಥೆಯಲ್ಲಿ ಡೈರೆಕ್ಟರ್ ಆಗಿದ್ದವರು, ಸೆಕ್ರೆಟೆರಿ ಆಗಿದ್ದವರು ಅಥವಾ ಇತರ ಯಾವುದಾದರೂ ಅಧಿಕಾರವನ್ನು ಹೊಂದಿದ್ದವರು ಅಲ್ಲಿ ಹಣವನ್ನು ದುರುಪಯೋಗ ಮಾಡಿದ್ದರೆ ರಿಜಿಸ್ಟ್ರಾರ್‌ರವರು ವಿಚಾರಣೆಮಾಡಿ ಯಾರು ಯಾರು ಅದನ್ನು ಕೊಡಬೇಕು ಎಂಬುದನ್ನು ತೀರ್ಮಾನ ಮಾಡಿ ಅಂತಿಮ ತೀರ್ಮಾನ ಕೊಟ್ಟಮೇಲೆ ಡೆಪ್ಯೂಟಿ ಕಮಿಷನರು ಕಂದಾಯದ ಬಾಕಿ ವಸೂಲು ಮಾಡುವಂತೆಯೂ ಕೂಡ ವಸೂಲು ಮಾಡಲು ಕ್ರಮ ತೆಗೆದುಕೊಳ್ಳಬಹುದು ಎಂದು ಇದೆ. ಮತ್ತೆ ಅಂಥ ಆಜ್ಞೆ ಆದಾಗ ಆ ಮನುಷ್ಯ ಅದರಮೇಲೆ ಡಿಸ್ಟ್ರಿಕ್ಟ್ ಕೋರ್ಟ್‌ಗೂ ಕೂಡ ಹೋಗಬಹುದು ಎಂದು ಇತ್ತು. ಸಾರ್ವಜನಿಕ ಸಂಸ್ಥೆಯಲ್ಲಿ ಲೆಕ್ಕಪತ್ರಗಳನ್ನು ಸರಿಯಾದ ರೀತಿಯಲ್ಲಿ ಹೇಗೆ ಇಟ್ಟುಕೊಳ್ಳಬೇಕು ಎಂಬುದು ವಿಧಾಯಕವಾಗಿದೆ. ಹಣ ದುರುಪಯೋಗವಾದಮೇಲೆ, ಲ್ಯಾಕೂನ ಆಫ್ ಲಾ ಎಂದು ಇದೆ, ಅದನ್ನುಪಯೋಗಿಸಿಕೊಂಡು ಅನೇಕ ಸಂದರ್ಭಗಳಲ್ಲಿ ಡಿಸ್ಟ್ರಿಕ್ಟ್ ಕೋರ್ಟಿಗೆ ಹೋದಾಗ ಬಹಳ ತಡ ಆಗುವ ಪ್ರಮೇಯ ಒದಗುತ್ತದೆ. ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ವಿಚಾರಣೆಯಾಗುವುದಕ್ಕೆ ಕಷ್ಟವಾಗುತ್ತದೆ. ಈ ಒಂದು ವ್ಯಾಖ್ಯಾನದಿಂದ ಟೆಕ್ನಿಕಲ್ ಗ್ರೌಂಡ್‌ಮೇಲೆ ವಾದ ಮಾಡುತ್ತಾ ಹೋಗುವುದಾದರೆ ಸಾರ್ವಜನಿಕರ ಸ್ವತ್ತು ದುರುಪಯೋಗವಾಗಿ ಯಾವ ಮನುಷ್ಯ ಹಣ ದುರುಪಯೋಗಪಡಿಸಿಕೊಂಡಿದ್ದಾನೆಯೋ ಅವನು ಹುಲಿಯಾಗಿಬಿಡುವ ಸಂಭವ ಬರುತ್ತದೆ. ಆ ರೀತಿ ಆಗಬಾರದು ಎಂಬ ದೃಷ್ಟಿಯಿಂದ, ಸರ್ಕಾರದವರು ಯೋಚನೆಮಾಡಿ 'ಯಾವುದಾದರೂ ಒಂದು ತೀರ್ಮಾನಕೊಡುವುದಿದ್ದರೆ ಅದಕ್ಕೆ ಬೇಕಾದರೆ ಅಪೀಲು ಇಟ್ಟುಕೊಳ್ಳಿ, ಇಲ್ಲದೇ ಇದ್ದರೆ ರಿಜಿಸ್ಟ್ರಾರ್‌ರವರ ತೀರ್ಮಾನವೇ ಅಂತಿಮ ತೀರ್ಮಾನವಾಗಿರಬೇಕು' ಎಂದು ಮಾಡಿದ್ದರು. ಹಾಗಿದ್ದುದನ್ನು ಜಾಯಿಂಟ್ ಸೆಲಕ್ಟ್ ಕಮಿಟಿಗೆ ಹೋದಾಗ ಯಾವ ಕಾರಣದಿಂದಲೋ ಯಾರಿಗೆ ಯಾವ ಭಯ ಹುಟ್ಟಿತೋ ಅದು ಕೂಡದು ಎಂದು ಮಾಡಿದರು. ಸರ್ಕಾರದವರು ಮೊದಲು ತಂದಿದ್ದ ರೀತ್ಯಾ ಬಹಳ ಚೆನ್ನಾಗಿತ್ತು. ಈಗ ಎಲ್ಲರಿಗೂ ಭಯ ಹುಟ್ಟಿದೆ. ಕೋ-ಆಪರೇಟೀವ್ ಮೂವ್‌ಮೆಂಟ್‌ನಲ್ಲಿ ಯಾರು ಕೆಲವರು ದುಡ್ಡು ತಿನ್ನುತ್ತಾರೋ ಅವರಮೇಲೆ ಕ್ರಮ ತೆಗೆದುಕೊಳ್ಳುವುದು ಇದರ ಉದ್ದೇಶವೇ ಹೊರತು ಯಾರಿಗೆ ಇದರಲ್ಲಿ ನಂಬಿಕೆ ಇದೆ, ಪ್ರಮಾಣಿಕತೆಯಿಂದ ಕೆಲಸ ಮಾಡುತ್ತಾರೆ ಅವರಿಗೆ ಯಾವ ಭಯವೂ ಇಲ್ಲ. ಸಾರ್ವಜನಿಕರ ಹಣ ಪೋಲಾಗದಂತೆ ಬಂದೋಬಸ್ತು ಮಾಡುವುದಕ್ಕೆ ಸರ್ಕಾರದವರು ಮೊದಲು ಯಾವ ಒಂದು ತಿದ್ದುಪಡಿಯನ್ನು ತಂದಿದ್ದರೋ ಅದು ಸಾಧು

ವಾದದ್ದಾಗಿದೆ. ಅದೇ ತಿದ್ದುಪಡಿಯನ್ನೇ ನಾನು ಪುನಃ ಇಲ್ಲಿ ತಂದಿದ್ದೇನೆ. ಸರ್ಕಾರದವರು ಇದನ್ನು ದಯವಿಟ್ಟು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—Amendment moved.

"For clause 14 the following shall be substituted :—

14. Substitution of new section for section 49 of Mysore Act LII of 1948.—For section 49 of the principal Act, the following section shall be substituted, namely.—

"49. Surcharge.—(1) Where, in the course of an audit under section 20 or an enquiry under section 39 or an inspection under section 40 or the winding up of a society, it appears that any person who has taken part in the organisation or management of the society or any past or present president, secretary, member of the managing committee or officer or any member of the staff of the society has misapplied or retained or become liable or accountable for any money or property of the society or has been guilty of misfeasance or breach of trust in relation to the society, the Registrar may, on a report received from the officer conducting the audit or holding the inquiry or inspection, or of the liquidator or on an application received from any creditor or contributory or the managing committee of the society or of his own motion, examine into the conduct of such person and after giving reasonable opportunity to the person concerned to submit his explanation, make an order requiring him to repay or restore the money or property or any part thereof respectively with interest at such rate as the Registrar thinks just or to contribute such sum to the assets of the society by way of compensation in regard to the misapplication, retainer, misfeasance or breach of trust as the Registrar thinks just.

(2) The order of the Registrar under sub-section (1) shall be final unless it is set aside by the Government on application made.

(3) Any sum ordered under this section to be repaid to a society or recovered as a contribution to its assets may be recovered on a requisition being made in this behalf to the Deputy Commissioner by the Registrar in the same manner as arrears of land revenue or in the manner provided in section 64.

(4) This section shall apply notwithstanding such person or officer may have incurred criminal liability by his Act."

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಈ ತಿದ್ದುಪಡಿಯನ್ನು ಪುಷ್ಟೀಕರಿಸುತ್ತೇನೆ. ಈ ಕೋ-ಆಪರೇಟಿವ್ ಸೊಸೈಟಿಗಳಲ್ಲಿ ಕೆಲಸಮಾಡತಕ್ಕಂಥ ಪ್ರತಿಯೊಬ್ಬರೂ ಕೂಡ ಭಯಭಕ್ತಿಯಿಂದ ತಮ್ಮ ಸ್ವಂತ ಹಣವನ್ನು ಯಾವ ರೀತಿ ಖರ್ಚುಮಾಡುತ್ತಾರೆಯೋ ಆ ರೀತಿ ಬಹಳ ಜಾಗರೂಕತೆಯಿಂದ ಖರ್ಚುಮಾಡಿ ಅಲ್ಲಿನ ಕೆಲಸಕಾರ್ಯಗಳನ್ನು ನಿರ್ವಹಣೆಮಾಡಬೇಕಾದುದು ಅತಿ ಮುಖ್ಯ. ಇಲ್ಲಿನ ವ್ಯವಹಾರ ಮಾಡುವಾಗ ದಾಕ್ಷಿಣ್ಯಕ್ಕೆ ಒಳಗಾಗಿ ಸಿಕ್ಕಿದವರಿಗೆ ಸಾಲ ಕೊಟ್ಟು ಅವರಿಂದ ತಮ್ಮ ಸ್ವಂತ ಕಾರ್ಯಗಳಿಗೆ ಸಹಾಯ ಪಡೆಯುವ ಮನೋಭಾವ ಅವರಲ್ಲುಂಟಾಗುವುದಾದರೆ ದೇಶಾದ್ಯಂತ ಸಹಕಾರ ತತ್ವವನ್ನನುಸರಿಸಿ ಕೆಲಸಕಾರ್ಯಗಳನ್ನು ನಡೆಸಬೇಕೆಂಬ ಸರ್ಕಾರದ ಧ್ಯೇಯ ಏನಿದೆಯೋ ಅದಕ್ಕೆ ಧಕ್ಕೆ ಬರುತ್ತದೆ. ಆದ್ದರಿಂದ ಶ್ರೀಮಾನ್ ಭೀಮಪ್ಪ ನಾಯಕರು ತಂದಿರುವ ತಿದ್ದುಪಡಿ ಸಾಧುವಾದದ್ದಾಗಿದೆ. ಆ ರೀತಿ ಮಾಡಬೇಕಾದದ್ದು ಒಳ್ಳೆಯದು ಎಂದು ಹೇಳಿ ಅದನ್ನು ಪುಷ್ಟೀಕರಿಸುತ್ತೇನೆ. ಅಷ್ಟೇ ಅಲ್ಲದೆ ಸರ್ಕಾರದವರು ಈ ಸೊಸೈಟಿಗಳಲ್ಲಿರತಕ್ಕ ಹಣದ ಭದ್ರತೆಗೆ ಹೆಚ್ಚು ನಿಗಾ ಕೊಡಬೇಕೆಂದು ಹೇಳಿ ಈ ಮಸೂದೆಯನ್ನು ಅನುಮೋದಿಸುತ್ತೇನೆ.

***Dr. R. NAGAN GOWDA.**—Sir, the amendment as now moved by the Hon'ble Member is almost word for word the same as the one that was originally brought forward in the Council stage. Both the Joint Select Committee and the Council adopted part of the amendment that was brought forward. Now, since it was thought that the time has come for this part of the amendment also to be adopted, and since it has been brought as an amendment again, the Government will accept the amendment.

4-30 P.M.

Mr. SPEAKER.—The question is :

"For Clause 14 the following shall be subtituted ;

(MR. SPEAKER.)

14. Substitution of new section for section 49 of Mysore Act LII of 1948.—For Section 49 of the principal Act, the following section shall be substituted, namely.—

"49. Surcharge.—(1) Where, in the course of an audit under section 20 or an enquiry under section 39 or an inspection under section 40 or the winding up of a society, it appears that any person who has taken part in the organisation or management of the society or any past or present president, secretary, member of the managing committee or officer or any member of the staff of the society has misapplied or retained or become liable or accountable for any money or property of the society or has been guilty of misfeasance or breach of trust in relation to the society, the Registrar may, on a report received from the officer conducting the audit or holding the inquiry or inspection, or of the liquidator or on an application received from any creditor or contributory or the managing committee of the society or of his own motion, examine into the conduct of such person and after giving reasonable opportunity to the person concerned to submit his explanation, make an order requiring him to repay or restore the money or property or any part thereof, respectively with interest at such rate as the Registrar thinks just or to contribute such sum to the assets of the society by way of compensation in regard to the misapplication, retainer, misfeasance or breach of trust as the Registrar thinks just.

(2) The order of the Registrar under sub-section (1) shall be final unless it is set aside by the Government on application made.

(3) Any sum ordered under this section to be repaid to a society or recovered as a contribution to its assets may be recovered on a requisition being made in this behalf to the Deputy Commissioner by the Registrar in the same manner as arrears of land revenue or in the manner provided in section 64.

(4) This section shall apply notwithstanding such person or officer may have incurred criminal liability by his Act."

The motion was adopted.

MR. SPEAKER.—The question is :

"That Clause 14 as amended stand part of the Bill."

The motion was adopted.

Clause 14 as amended was added to the Bill.

MR. SPEAKER.—Clauses 15 to 18 both inclusive. The question is :

"That Clauses 15 to 18 both inclusive stand part of the Bill."

The motion was adopted.

Clauses 15 to 18 both inclusive were added to the Bill.

MR. SPEAKER.—Clause 1. The question is :

"That Clause 1 stand part of the Bill."

The motion was adopted.

Clause 1 was added to the Bill.

MR. SPEAKER.—Title and Preamble. The question is :

"That the Title and the Preamble stand part of the Bill."

The motion was adopted.

The Title and the Preamble were added to the Bill.

Motion t pass.

DR. R. NAGAN GOWDA.—I move :

"That the Mysore Co-operative Societies (Amendment) Bill, 1954, as passed by the Legislative Council and as amended, be passed."

In doing so, I just wish to thank the Hon'ble Members for supporting the

amendments that have been brought by the Government to the existing Act. The only object with which we have brought these amendments is to make the co-operative societies work better and be of increased service every day.

Mr. SPEAKER.—The question is :

"That the Mysore Co-operative Societies (Amendment) Bill, 1955, as passed by the Legislative Council and as amended, be passed."

The motion was adopted.

MOTOR VEHICLES (MYSORE AMENDMENT) BILL, 1955.

Motion to consider.

*Sri H. SIDDAVEERAPPA (Minister for Home and Industries).—Sir. I beg to move :

"That the Motor Vehicles (Mysore Amendment) Bill, 1955, be taken into consideration."

This is a Bill praying for the amendment of two sections, namely, sections 62 and 64 of the Motor Vehicles Act. During the course of the working of this Act, while an appeal was preferred before the Government, certain legal issues were raised, namely, whether the Government or the S.T.A. had the power of issuing temporary permits or whether there should be a second appeal under the Indian Motor Vehicles Act. As the Act now stands, under section 64, there is a power of appeal to the S.T.A. on the order passed by any R.T.A. and on the order so passed by the S.T.A. there is no power of appeal, no power of revision according to the contention of some. This question was examined in the Law section. They advised that it would be better that in order to set at rest any doubt that might arise in the minds of some people. these two sections might be suitably amended. The S.T.A. also has recommended that the amendment is necessary. The President's permission also has been obtained and these amendments have been put in.

With regard to section 62, the amendment is to the effect that a temporary permit may be granted during the pendency of an appeal and before the appeal is disposed of by any appellate authority and in section 64, the amendment is to the effect that whoever is aggrieved by a decision of the S.T.A. may prefer an appeal to Government. There is no direct appeal from the decision of the R.T.A to the Government even as the tenor of the Act now stands-section 64. From the decision of the R.T.A. an appeal lies only to the S.T.A. and whoever is aggrieved by an order of the S.T.A. may come before the Government by way of appeal. These provisions are to be found elsewhere in Madras and Bombay. This amending Bill is brought forward with a view to clear the doubts in the minds of some and with a view to set at rest any points of controversy that may arise. This is a wholesome measure which is put in by the experience of the working of this Act for the last two years in the State and I request the House to accord their approval to this amendment Bill.

Mr. SPEAKER.—Motion moved :

"That the Motor Vehicles (Mysore Amendment) Bill, 1955, be taken into consideration."

*Sri A. BHEEMAPPA NAIK (Molakalmuru).—I do not know why the Home Minister is anxious to get more powers, even though he has powers only to grant temporary permits. To grant temporary permits he has the right under certain circumstances, for fairs, jatras or emergency circumstances under such circumstances and where it is inevitable. When a person applies for a licence and even before the consideration or final grant, if he approaches Government the Minister wants power to grant him the licence temporarily. Is that correct, I want to know ? Supposing before a young man becomes a graduate, to appoint him as an Amildar you give him a Degree temporarily because he has appealed and if he passes, regularise it, is that correct ? (*Interruption from Sri K. Pattabhiraman.*) That